ಹಿಂದುಳಿದ ವರ್ಗದವರು ಹಾಸ್ಟೆಲ್‌ಗಳು

2949 - ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗದವರ ಸಲುವಾಗಿ ರಾಜ್ಯದಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳು ಇವೆ? (ಅವುಗಳ ವಿವರ ನೀಡುವುದು)

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಹಣವನ್ನು ಹಾಸ್ಟೆಲ್ ಸಲುವಾಗಿ ಸರ್ಕಾರವು ವೆಚ್ಚ ಮಾಡುತ್ತದೆ. ಪ್ರತಿ ವಿದ್ಯಾರ್ಥಿಗಳ ಸಲುವಾಗಿ ಮಾಸಿಕವಾಗಿ ಎಷ್ಟು ಹಣ ವೆಚ್ಚ ಮಾಡಲಾಗುತ್ತಿದೆ?

ಇ) ರಾಜ್ಯದಲ್ಲಿ ಇನ್ನು ಎಷ್ಟು ಹಾಸ್ಟೆಲ್‌ಗಳು ಅವಶ್ಯಕತೆ ಇರುತ್ತದೆ? (ವಿವರ ನೀಡುವುದು)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಲುವಾಗಿ 1528 ಹಾಸ್ಟೆಲ್ ಅನುದಾನಿತ ವಿದ್ಯಾರ್ಥಿನಿಲಯ ಅನಾಥಾಲಯಗಳಿದ್ದು ವಿವರಗಳು ಈ ಕೆಳಕಂಡಂತಿವೆ.

		ಬಾಲಕರು	ಬಾಲಕಿಯರು	ಒಟ್ಟು
1)	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	895	111	1006
2)	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	106	59	165
3)	ಹಿಂದುಳಿದ ವರ್ಗಗಳ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳು.	205	12	217
4)	ಅಲ್ಪಸಂಖ್ಯಾತರ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳು	33	6	39
5)	ಖಾಸಗಿ ಅನುದಾನಿತ ಅನಾಥಾಲಯಗಳು	93	8	101
	ಒಟ್ಟು	**1332**	**196**	**1528**

ಆ) ರಾಜ್ಯದಲ್ಲಿ ಒಟ್ಟು ರೂ. 4324.30ಲಕ್ಷಗಳನ್ನು ಹಾಸ್ಟೆಲ್‌ಗಳ ಸಲುವಾಗಿ ಸರ್ಕಾರವು ವೆಚ್ಚ ಮಾಡುತ್ತದೆ. ಹಾಗೂ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ ರೂ. 933.45 ಲಕ್ಷಗಳನ್ನು ಒದಗಿಸಲಾಗಿದೆ. ಪ್ರತಿ ವಿದ್ಯಾರ್ಥಿಗೆ ಮಾಸಿಕವಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗುತ್ತಿದೆ.

1) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ - ರೂ. 356

2) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ - ರೂ. 400

3) ಹಿಂದುಳಿದ ವರ್ಗಗಳ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ - ರೂ. 350

4) ಖಾಸಗಿ ಅನುದಾನಿತ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳಲ್ಲಿ - ರೂ. 350

5) ಖಾಸಗಿ ಅನುದಾನಿತ ಅನಾಥಾಲಯಗಳಲ್ಲಿ - ರೂ. 100

ಇ) ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕೆ ಒಟ್ಟು 638 (591 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಮತ್ತು 47 ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳಿಗೆ) ಬೇಡಿಕೆ ಇದ್ದು, ಅದನ್ನು ಅವಶ್ಯಕವಾಗಿದೆ ಎಂದು ಪರಿಗಣಿಸಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಅನುಬಂಧ

1996-97ನೇ ಸಾಲಿನಿಂದ ವಿಧ್ಯಾರ್ಥಿನಿಲಯಗಳ ಮಂಜೂರಾತಿ ಕೋರಿ ಬಂದಿರುವ ಮನವಿಗಳ ವಿವರಗಳು.

ಕ್ರ. ಸಂ.	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	ಒಟ್ಟು
1	2	3	4	5
1.	ಬೆಂಗಳೂರು (ನಗರ)	1	-	1
2.	ಬೆಂಗಳೂರು (ಗ್ರಾಮಾಂತರ)	19	1	20
3.	ಬಳ್ಳಾರಿ	18	2	20
4.	ಬೆಳಗಾಂ	50	5	55
5.	ಬೀದರ್	15	-	15
6.	ಬಿಜಾಪುರ	44	6	50
7.	ಚಿಕ್ಕಮಗಳೂರು	23	1	24
8.	ಚಿತ್ರದುರ್ಗ	18	1	19
9.	ದಕ್ಷಿಣ ಕನ್ನಡ	12	1	13
10.	ಧಾರವಾಡ	62	13	75
11.	ಗುಲ್ಬರ್ಗಾ	49	4	53

1	2	3	4	5
12.	ಹಾಸನ	19	2	21
13.	ಕೊಡಗು	8	-	8
14.	ಕೋಲಾರ	22	-	22
15.	ಮಂಡ್ಯ	46	-	46
16.	ಮೈಸೂರು	27	-	27
17.	ರಾಯಚೂರು	32	-	32
18.	ಶಿವಮೊಗ್ಗ	55	07	62
19.	ತುಮಕೂರು	36	-	36
20.	ಉತ್ತರ ಕನ್ನಡ	35	04	39
	ಒಟ್ಟು	**591**	**47**	**638**

ಬುಡ್ಡರ್ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು

2950 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆಯಲ್ಲಿ ವಾಸಿಸುತ್ತಿರುವ ಬೆಟ್ಟ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಿಚಾರದಲ್ಲಿ ರಾಜ್ಯ ಸರ್ಕಾರವು ಯಾವ ಕ್ರಮ ಕೈಗೊಂಡಿರುತ್ತದೆ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಬೆಟ್ಟ ಕುರುಬ ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಜಿಲ್ಲಾ ಪಂಚಾಯತ್ ಕೊಡಗು ಜಿಲ್ಲೆಯಿಂದ ಪ್ರಸ್ತಾವನೆಯು ಬಂದಿದ್ದು ಇದನ್ನು ಇತ್ತೀಚೆಗೆ ಸರ್ಕಾರಿ ಆದೇಶ ಸಂಖ್ಯೆ : ಸಕಇ 245 : ಎಸ್ ಎಡಿ 85 (ಭಾ), ದಿನಾಂಕ 19-5-97ರಲ್ಲಿ ಪುನರ್ ರಚಿತವಾಗಿರುವ ಸಮಿತಿಯ ಮುಂದೆ ಮಂಡಿಸಲಾಗುವುದು.

ಗಂಗಾಮತ ಮತ್ತು ಅದರ 38 ಪರ್ಯಾಯ ಜಾತಿಗಳನ್ನು ಪರಿಶಿಷ್ಟ ಪಂಗಡದ ಗುಂಪಿಗೆ ಸೇರಿಸುವ ಬಗ್ಗೆ

295 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ರಾಜ್ಯ ಸರ್ಕಾರ ಗಂಗಾಮತ ಮತ್ತು ಅದರ 38 ಪರ್ಯಾಯ ಜಾತಿಗಳನ್ನು ಹಾಗೂ ಸಿದ್ಧಿ ಜಾತಿಯನ್ನು ಜೊತೆಗೆ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿರುವ